ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1	366
ಪ್ರಶ್ನೆ ಕೇಳಿರುವ ವಿಧಾನಸಭೆಯ ಸದಸ್ಯರು	ಶ್ರೀ ಷಡಕ್ಷರಿ . ಕೆ (ತಿಪಟೂರು)
ಉತ್ತರ ನೀಡುವ ಸಚಿವರು	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ 1	24.07.2024

ವಿಷಯ: ಬೆಳೆ ವಿಮೆ

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದ ರೈತರಿಗೆ ಬೆಳೆ ವಿಮೆ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಕಾರ್ಯಕ್ರಮ ಜಾರಿಯಲ್ಲಿದೆಯೇ ; ಹಾಗಿದ್ದಲ್ಲಿ , ಈ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ;	ರಾಜ್ಯದ ರೈತರಿಗೆ ಬೆಳೆ ವಿಮೆ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮ ಜಾರಿಯಲ್ಲಿದೆ . ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಸೌಲಭ್ಯವನ್ನು ರಾಜ್ಯದ ಎಲ್ಲಾ ರೈತರಿಗೆ ತಲುಪಿಸಲು , ಸರ್ಕಾರವು ಸ್ಥಳೀಯ ಮತ್ತು ರಾಜ್ಯ ಪ್ರಮುಖ ದಿನಪತ್ರಿಕೆಗಳಲ್ಲಿ ಜಾಹಿರಾತು , ಭಿತ್ತಿಪತ್ರಗಳು /ಕರಪತ್ರಗಳ ವಿತರಣೆ , ತರಬೇತಿಗಳನ್ನು ನೀಡುವ ಮುಖೇನ, ಸಮೂಹ ಮಾಧ್ಯಮಗಳ ಮೂಲಕ, ಜನಸ್ಪಂದನ / ಗ್ರಾಮ ಸಭೆಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಹಾಗೂ ವಿಮಾ ಸಂಸ್ಥೆಗಳಿಂದಲೂ ಸಹ ಸಮೂಹ ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅರಿವು ಮೂಡಿಸಲಾಗುತ್ತಿದೆ . ದೂರದರ್ಶನ ಮತ್ತು ಆಕಾಶವಾಣಿ ಮೂಲಕ ರಾಜ್ಯ ಹಾಗೂ ಜಿಲ್ಲಾ ಮಟ್ಟಗಳಲ್ಲಿಯೂ ಸಹ ಎಲ್ಲಾ ಹಂಗಾಮಿನ ಪ್ರಾರಂಭದಲ್ಲಿ ಬೆಳೆ ವಿಮೆ ಯೋಜನೆಯ ಪರಿಚಯ ಮತ್ತು ನೋಂದಣಿ ಕುರಿತು ಮಾಹಿತಿಯನ್ನು ನೀಡಲಾಗುತ್ತಿದೆ . 2021-22 ನೇ ಸಾಲಿನಿಂದ ಪ್ರತಿ ವರ್ಷ , ಪ್ರತಿ ಹಂಗಾಮು ಪ್ರಾರಂಭದಲ್ಲಿ “Crop Insurance Week” ಎಂದು ಎಲ್ಲಾ ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನದ ಸಹಭಾಗಿದಾರರೊಂದಿಗೆ ಬೆಳೆ ವಿಮೆ ನೋಂದಣಿ

<table>
<tr><td></td><td></td><td>ಕುರಿತು ಭಿತ್ತಿಪತ್ರಗಳು ಮತ್ತು ಕರಪತ್ರಗಳ ವಿತರಣೆ ಮಾಡುವ ಮೂಲಕ ರೈತರಿಗೆ ವ್ಯಾಪಕವಾಗಿ ಅರಿವು ಮೂಡಿಸಲಾಗುತ್ತಿದೆ.

ರೈತರ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು “ನನ್ನ ಪಾಲಿಸಿ ನನ್ನ ಕೈಯಲ್ಲಿ” ಎಂಬ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಇದರ ಅಡಿಯಲ್ಲಿ ಬೆಳೆ ವಿಮೆ ಯೋಜನೆಯಡಿ ನೋಂದಾಯಿಸಿಕೊಂಡ ರೈತರ ಮನೆ ಬಾಗಿಲಿಗೆ ವಿಮಾ ಸಂಸ್ಥೆಯ ಪ್ರತಿನಿಧಿಗಳಿಂದ ಪಾಲಿಸಿಯನ್ನು ವಿತರಣೆ ಮಾಡುವ ಮೂಲಕ ಬೆಳೆ ವಿಮೆ ಕುರಿತು ಮಾಹಿತಿ ನೀಡಲಾಗುತ್ತಿದೆ.</td></tr>
<tr><td>ಆ)</td><td>2023-24 ನೇ ಸಾಲಿನಲ್ಲಿ ಬೆಳೆ ವಿಮೆ ಮಾಡಿಸಿದ ರಾಜ್ಯದ ರೈತರ ಸಂಖ್ಯೆ ಎಷ್ಟು ಹಾಗೂ ಬೆಳೆ ವಿಮೆ ಸೌಲಭ್ಯ ಪಡೆದ ರೈತರ ಸಂಖ್ಯೆ ಎಷ್ಟು?</td><td>ರಾಜ್ಯದಲ್ಲಿ 2023-24 ನೇ ಸಾಲಿನಲ್ಲಿ ಬೆಳೆ ವಿಮೆ ಮಾಡಿಸಿದ ರೈತರ ಹಾಗೂ ಬೆಳೆ ವಿಮೆ ಸೌಲಭ್ಯ ಪಡೆದ ರೈತರ ಸಂಖ್ಯೆಯ ವಿವರ ಈ ಕೆಳಕಂಡಂತಿದೆ:
<table>
<tr><th>ಹಂಗಾಮು</th><th>ಬೆಳೆ ವಿಮೆಗೆ ನೋಂದಣಿಯಾದ ರೈತರ ಸಂಖ್ಯೆ</th><th>ಬೆಳೆ ವಿಮೆ ಸೌಲಭ್ಯ ಪಡೆದ ರೈತರ ಸಂಖ್ಯೆ</th></tr>
<tr><td>ಮುಂಗಾರು</td><td>19,14,839</td><td>15,41,043</td></tr>
<tr><td>ಹಿಂಗಾರು & ಬೇಸಿಗೆ</td><td>5,88,374</td><td>1,35,724</td></tr>
<tr><td>ಒಟ್ಟು</td><td>25,03,213</td><td>16,76,767</td></tr>
</table></td></tr>
</table>

ಕೃಷಿ ನಿರ್ದೇಶಕರು

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-01. ಸಂಖ್ಯೆ:ಜಕೃನಿ(ಬೆವಿ)/LAQ-366/2024-25
ದಿನಾಂಕ:18.07.2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಷಡಕ್ಷರಿ ಕೆ
(ತಿಪಟೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ
ಸಂಖ್ಯೆ:366 ಗೆ
ಉತ್ತರಿಸುವ ಕುರಿತು.
*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಷಡಕ್ಷರಿ ಕೆ. (ತಿಪಟೂರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:366 ಗೆ ಮಾಹಿತಿ ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.

ತಮ್ಮ
ವಿಶ್ವಾಸಿ,

ಕೃಷಿ
ನಿರ್ದೇಶಕರು